ಶ್ರೀ ಜೆ. ಎಸ್. ಅಮ್ಮಣ್ಣನವರ್.—ಸ್ವಾಮಿ, ಚೆಕ್ಕೋಡಿ ತಾಲೂಕಿನಲ್ಲಿ ಎಷ್ಟು ಹಳ್ಳಿಗಳಿಗೆ ಎಷ್ಟು ಎಷ್ಟು ಎಕರೆ ನೀರಾವರಿಯಾಗುತ್ತದೆ ಎನ್ನುವುದನ್ನು ತಿಳಿಸುತ್ತೀರಾ ?

†ಶ್ರೀ ಎಚ್. ಎನ್. ನಂಜೇಗೌಡ.—ಸುಮಾರು ೧೨ ಟಿ.ಎಂ.ಸಿ ಎಫ್.ಟಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಮೈಸೂರು ರಾಜ್ಯದ ಚಿಕ್ಕೋಡಿ ತಾಲ್ಲೂಕಿನಲ್ಲಿ ೩೨೧೮೦ ಎಕರೆ ನೀರಾವರಿಯಾಗುತ್ತದೆ.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಮೈಸೂರು ಹಾಗೂ ಮಹಾರಾಷ್ಟ್ರ ಸರ್ಕಾರಗಳ ನಡುವೆ ಅಗ್ರೀಮೆಂಟ್ ಯಾವಾಗ ಆಗಿದೆ ? ಮತ್ತು ಇದರ ಕನ್‌ಸ್ಟ್ರಕ್ಷನ್ ಕಾಸ್ಟ್ ಏನಾದರೂ ಕೊಡಬೇಕಾಗಿ ಬರುತ್ತದೆಯೇ ? ಹೇಗೆ ?

ಶ್ರೀ ಎಚ್. ಎನ್. ನಂಜೇಗೌಡ.—ಟ್ರಿಬ್ಯೂನಲ್ ಮುಂದೆ ಈ ಪ್ರಶ್ನೆ ಬಂದಂಥ ಕಾಲದಲ್ಲಿ ಮೈಸೂರು ಮತ್ತು ಮಹಾರಾಷ್ಟ್ರ ಇವೆರಡನ್ನೂ ಜಾಯಿಂಟ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳೋಣ ಎಂದೂ ಒಪ್ಪಂದ ಆದ ಹಾಗೆ ಆಗಿದೆ. ಆದರೆ ಅದು ಇನ್ನೂ ಅಧಿಕೃತವಾಗಿ ಬಂದಿಲ್ಲ. ಈ ಬಗ್ಗೆ ಕರೆಸ್ಪಾಂಡೆನ್ಸ್ ನಡೆಯುತ್ತಾ ಇದೆ ಇನ್ನೂ ಫೈನಲೈಸ್ ಆಗಿಲ್ಲ. ಇದರಲ್ಲಿ ಒಟ್ಟು ೩೬ ಟಿ ಎಂ.ಸಿ.ಎಫ್.ಟಿ. ನೀರಿನಲ್ಲಿ ೨೬ ಟಿ.ಎಂ.ಸಿ.ಎಫ್.ಟಿ. ಅಷ್ಟು ನೀರನ್ನು ಮಹಾರಾಷ್ಟ್ರದವರು ಮತ್ತು ಇನ್ನು ಉಳಿದ ೧೦ ಟಿ.ಎಂ. ಎಫ್.ಸಿ. ಅಷ್ಟು ನೀರನ್ನು ಮೈಸೂರು ರಾಜ್ಯದವರೂ ಉಪಯೋಗಿಸಿಕೊಳ್ಳಬಹುದು ಎಂದು ತೀರ್ಮಾನ ವಾಗಿದೆ. ಈ ಬಗ್ಗೆ ಇನ್ನೂ ಕರೆಸ್ಪಾಂಡೆನ್ಸ್ ಇನ್ನೂ ಮುಂಗಿದಿಲ್ಲ.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಮಹಾರಾಷ್ಟ್ರ ಮುಖ್ಯಮಂತ್ರಿಗಳು ಬೀದರ್‌ನಲ್ಲಿ ಈ ಬಗ್ಗೆ ಮೈಸೂರು ಸರ್ಕಾರದವರು ಇನ್ನೂ ಸಮ್ಮತಿ ಕೊಟ್ಟಿಲ್ಲ ಎಂದು ಮಾಡಿದ್ದಾರೆ. ಇದರ ಬಗ್ಗೆ ಏನು ಹೇಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಅವರು ಅಧಿಕೃತವಾಗಿ ಒಪ್ಪಿಯಾಗಿಲ್ಲ ಎಂದು ಹೇಳಿರಬಹುದು. ಆದರೆ ಟ್ರಿಬ್ಯೂನಲ್ ಮುಂದೆ ಎರಡು ಸರ್ಕಾರಗಳೂ ಕೂಡ ಒಪ್ಪಿಕೊಂಡು ತೀರ್ಮಾನ ಮಾಡಿಕೊಂಡಿದ್ದಾರೆ. ಈ ಬಗ್ಗೆ ನಮ್ಮ ಮುಖ್ಯಮಂತ್ರಿಗಳನ್ನೂ ಕೂಡ ಮೀಟಿಂಗಿಗೆ ಕರೆದಿದ್ದರು. ಆದರೆ ಅವರು ತಮ್ಮ ಕಾರ್ಯಭಾರದಿಂದ ಮೀಟಿಂಗ್‌ಗೆ ಹೋಗಲಿಕ್ಕಾಗಲಿಲ್ಲ. ಅಧಿಕೃತವಾಗಿ ೨ ಸರ್ಕಾರಗಳೂ ಕೂಡ ಸಹಿ ಹಾಕಿದ್ದಾರೆ ಎಂದು ನಾನು ನಂಬಿದ್ದೇನೆ.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಕೇಂದ್ರದ ವಿದ್ಯುತ್ ಮತ್ತು ನೀರಾವರಿ ಮಂಡಲಿಯವರು ಇದಕ್ಕೆ ಏನಾದರೂ ಒಪ್ಪಿಗೆ ಕೊಟ್ಟಿದ್ದಾರೆಯೇ ಹೇಗೆ ?

ಶ್ರೀ ಎಚ್. ಎನ್. ನಂಜೇಗೌಡ.—ಅದರ ಡೀಟೇಲ್ಸ್ ನನ್ನ ಹತ್ತಿರ ಇಲ್ಲ.

DIVERSION OF SEWERAGE WATER

1015. SRI M. SIDDAMADAIAH (Kollegal).—Will the **Minister for** Municipal Administration be pleased be state :—

(*a*) whether any action has been taken by Government to divert the sewerage water flowing behind "REMCO" and Electric Factory in Bangalore City ;

(*b*) whether any programme has been undertaken by Government to improve the health condition of the people residing round about ?

SRI AZEEZ SAIT (Minister for Labour).—On behalf of

SRI B. BASAVALINGAPPA (Minister for Municipal Administration).—

(*a*) Yes.

(*b*) Yes.

ಶ್ರೀ ಎಂ. ಸಿದ್ದಮಾದಯ್ಯ.—ನಾನು ೦೦೦೫ನೇ ಪ್ರಶ್ನೆಯನ್ನು ಕೇಳುತ್ತೇನೆ.

SRI AZEEZ SAIT.—Answers are as printed.

MADAM SPEAKER.—I have not received any requisition from the Hon Minister for Municipal Administration No doubt I can permit the Hon. Minister to answer but I think I should get prior requisition.

SRI AZEEZ SAIT.—May I request the chair to permit me to reply ?

MADAM SPEAKER.—Yes.

ಶ್ರೀ ಎಂ ಸಿದ್ದಮಾದಯ್ಯ —ಸ್ವಾಮಿ, ಬೆಂಗಳೂರು ನಿಟಿಗೆ ಸೇರಿದ ರೆಂಕೋ ಮತ್ತು ಎಲೆಕ್ಟ್ರಿಕ್ ಫ್ಯಾಕ್ಟರಿಯ ಹಿಂದುಗಡೆ ಕೊಳಚೆ ನೀರನ್ನು ಬೇರೆ ಕಡೆ ಹೋಗಲಿಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ ?

†SRI AZEEZ SAIT.—The outfall sewers in Vrishabhavathi Valley connecting the sewerage treatment plant are under construction After completion of outfall sewers, the waste water which is now flowing in the open drain can be let into the outfall sewers, thus preventing the flow of waste water in the open drain. However, the authorities of REMCO and GEC factories should take action to lead off their industrial wastes into the Board sewers after treating the effluent to allowable standards.

ಶ್ರೀ ಎಂ. ಸಿದ್ದಮಾದಯ್ಯ —ವೃಷಭಾವತಿ ವ್ಯಾಲಿ ಪ್ರದೇಶದಲ್ಲಿರತಕ್ಕಂಥ ಜನರಿಗೆ ಆರೋಗ್ಯ ಕೆಟ್ಟು ಬಹಳ ಜನರು ಕಾಯಿಲೆ ಬಿದ್ದು ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ಅದನ್ನು ಹೋಗಲಾಡಿಸುವುದಕ್ಕೆ ಆ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಜೀಜ್‌ಸೇಟ್.—ವೃಷಭಾವತಿ ವ್ಯಾಲಿಯಲ್ಲಿರತಕ್ಕಂಥ ಸೂಯರೇಜ್ ಟ್ರೀಟ್‌ಮೆಂಟ್ ಮಾಡುವುದಕ್ಕೋಸ್ಕರ ಒಂದು ಪ್ಲಾಂಟನ್ನು ಕನ್‌ಸ್ಟ್ರಕ್ಟ್ ಮಾಡುತ್ತಿದ್ದಾರೆ. ಈ ಪ್ಲಾಂಟ್‌ಗೆ ಬೆಂಗಳೂರು ನಿಟಿಗೆ ಸೇರಿದ ರೆಂಕೋ ಕಂಪನಿ ಮತ್ತು ಎಲೆಕ್ಟ್ರಿಕ್ ಫ್ಯಾಕ್ಟರಿಯವರ ವೇಸ್ಟ್ ವಾಟರ್‌ನ್ನು ಬಿಡುವುದಕ್ಕೆ ಹೇಳಿದ್ದೇವೆ ಅದು ಬೆಳವಣಿಗೆ ಆದತಕ್ಷಣ ಸರಿಹೋಗುತ್ತದೆ.

ಶ್ರೀ ಕೆ. ಆರ್. ಎಸ್. ನಾಯಿಡು.—ಸ್ವಾಮಿ, ಇದೇ ಪ್ರಶ್ನೆಯು (ಅ) ಗೆ ಉತ್ತರವಾಗಿ "ಹೌದು" ಎಂದು ಹೇಳಿದ್ದೀರಿ ಆ ಕಾರ್ಯಕ್ರಮ ಯಾವ ಮಟ್ಟದಲ್ಲಿ ಇದೆ ? ಅದು ಎಷ್ಟು ದಿವಸದಲ್ಲಿ ಪೂರೈಸುತ್ತದೆ ? ಅಲ್ಲಿಯ ಜನರ ಆರೋಗ್ಯ ಸ್ಥಿತಿಯನ್ನು ಉತ್ತಮ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಅಜೀಜ್ ಸೇಟ್.—ಈ ವೃಷಭಾವತಿ ವ್ಯಾಲಿ ಜಾಗದಲ್ಲಿರುವ ಬಾಪೂಜಿನಗರ ಮತ್ತು ಗುಡ್ಡದಹಳ್ಳಿ ಈ ಎರಡು ಜಾಗಗಳು ಏನು ಇದೆ ಅಲ್ಲಿ ಡ್ರೈನೇಜ್ ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಆಮೇಲೆ ರೆಂಕೋ ಕಂಪನಿಯವರು ಮತ್ತು ಎಲೆಕ್ಟ್ರಿಕ್ ಫ್ಯಾಕ್ಟರಿಯವರ ಪೇಸ್ಟ್ ನೀರನ್ನು ನೀವೂ ಕೂಡ ಆ ಪ್ಲಾಂಟ್‌ಗೇ ಬಿಡಬೇಕೆಂದು ಹೇಳಿದ್ದೇವೆ. ಈ ಪ್ಲಾಂಟ್‌ನ್ನು ೧೯೭೫-೭೬ ರೊಳಗೆ ಪೂರ್ತಿಗೊಳಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಇದು ಬೆಳವಣಿಗೆ ಆದತಕ್ಷಣ ಈ ತೊಂದರೆಯೆಲ್ಲಾ ಹೋಗುತ್ತದೆ.

ಶ್ರೀ ಬಿ. ರಾಮೇಗೌಡ.—ಈಗ ಒಂದು ಪ್ಲಾಂಟ್‌ನ್ನು ತಯಾರು ಮಾಡುತ್ತಿದ್ದಾರೆ ಎಂದು ಹೇಳಿದಿರಿ. ಇದು ಬೆಂಗಳೂರು ವಾಟರ್ ಅಂಡ್ ಸೂಯರೇಜ್ ಬೋರ್ಡ್‌ನವರ ಬಜೆಟ್‌ನಲ್ಲಿ ಸೇರಿದೆಯೋ ಅಥವಾ ಬೇರೆ ಯಾವುದಾದರೂ ಬಜೆಟ್ಟಿನಲ್ಲಿ ಸೇರಿದೆಯೋ ?

ಶ್ರೀ ಅಜೀಜ್ ಸೇಟ್.—ನನ್ನ ಹತ್ತಿರ ಅಷ್ಟು ವಿವರ ಇಲ್ಲ.

ಶ್ರೀ ಎಂ. ಸಿದ್ದಮಾದಯ್ಯ.—ಈ ಕಾರ್ಯಕ್ರಮವನ್ನು ಬೇಗ ಮಾಡಿಕೊಡಿ ಮುಗಿಸುತ್ತೀರಾ ?

ಶ್ರೀ ಅಜೀಜ್ ಸೇಟ್.—ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನಪಡುತ್ತೇನೆ.

MADAM SPEAKER.—Now Question one over.

Questions for Answers on the day (but not taken up)

AMOUNT SANCTIONED BY THE CHINTAMANI TALUK PRIMARY LAND DEVELOPMENT BANK FOR DIGGING WELLS

476. SRI CHOWDA REDDY (Chintamani).—Will the Minister for Co-operation be pleased to state :—

(*a*) the amount sanctioned by the Chintamani Taluk Primary Land Development Bank for digging wells in Chintamani Taluk, since 1965 ;

(*b*) the number of wells completed by obtaining the full amount ;

(*c*) the number of wells not completed by obtaining first and second instalments ;

(*d*) the reasons for not completing such wells ;

(*e*) whether it has come to the notice of the Government that due to non-availibility of first and second instalments of loans for ryots in time and due to the commencement of rainy season the wells have been collapsed ;

(*f*) in some of the cases wherein the ryots are unable to repay the loans due to collapsing of wells and due to non-finding of water on account of rocks whether it is under consideration of Government to grant remission in respect of such wells ;

(*g*) the number of wells in respect of which the final instalment has not been paid even though the well works have been completed ?